ಓ ಎಸ್ ನಂಬರ 88/2024
ಪಿ.ಡಬ್ಲ್ಯೂ 1

**ದಿನಾಂಕಃ 15.10.2025.**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಸಿ ಸಿ ವಕೀಲರಿಂದ ಃ

ನನ್ನ ಮಗ ದೂರಿನಲ್ಲಿ ಏನು ಬರೆದಿದ್ದಾನೆ ಎಂದು ಗೊತ್ತಿರುತ್ತದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನಿಮ್ಮ ಮಗ ಅರುಣ ನೀಡಿರುವ ದೂರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಗ ಅರುಣ ನಮ್ಮ ಜೊತೆ ಇರುತ್ತಾನೆ ಎಂದರೆ ಸರಿ. ಪ್ರತಿನಿತ್ಯ ನಾವು ನಮ್ಮ ಮನೆತನದ ವ್ಯವಹಾರದ ಬಗ್ಗೆ ಚರ್ಚೆ ಮಾಡಿರುವುದಿಲ್ಲ. ನನ್ನ ಮಗ ನೀಡಿದ ದೂರಿನ ಬಗ್ಗೆ ಏನಾಯಿತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಪೋಲಿಸರು ತನಿಖೆ ಮಾಡಿ ಡಿ ಸಮ್ಮರಿ ಹಾಕಿರುವ ವಿಚಾರ ನಿಮಗೆ ಗೊತ್ತಿರುತ್ತದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

3 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಅವನ ಹೆಸರಿನಲ್ಲಿ ಯಾವುದೇ ಸ್ವತ್ತು ಇರಲಿಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸುತ್ತಾ ಇದ್ದು 3 ನೇ ಪ್ರತಿವಾದಿ 2002 ರಲ್ಲಿ ಉಪ ತಹಶೀಲ್ದಾರ ಅವರಿಂದ ಪರವಾನಗಿ ಪ್ರಮಾಣ ಪತ್ರ ಪಡೆದಿರುತ್ತಾನೆ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಹೌದು ಎಂದು ಒಪ್ಪಿ ಕೊಂಡಿದ್ದು ಸಾಕ್ಷಿ ಮುಂದುವರೆದು ಪರವಾನಗೆ ನಾನೇ ಕೊಡಿಸಿರುತ್ತೇನೆ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿ ಕೊಂಡ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನೀವು ಹೆಚ್ಚಾಗಿ ಸಂಪಗಾಂವನಲ್ಲಿಯೇ ಸಿದ್ದರೂಢ ತತ್ವಗಳನ್ನು ಪ್ರಚಾರ ಮಾಡುತ್ತಾ ಅಲ್ಲಿಯೇ ಇರುತ್ತಾ ಇದ್ದೀರಿ ಎಂದರೆ ಸಾಕ್ಷಿ ಅಲ್ಲಿಯೂ ಮಾಡುತ್ತಾ ಇದ್ದೆ. ಬೇರೆ ಸ್ಥಳಕ್ಕೂ ಸಹ ಹೋಗುತ್ತಾ ಇದ್ದೆ ಎನ್ನುತ್ತಾರೆ. ನನಗೆ ಆಧ್ಯಾತ್ಮಿಕದ ಒಲವು ಬಹಳ ಇರುತ್ತದೆ ಎಂದರೆ ಸರಿ. ಲೌಕಿಕ ವಿಚಾರಗಳ ಬಗ್ಗೆ ನಾನು ಗಮನ ಕೊಡುವುದಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಬಿದ್ದಾಗ ಕೊಡುತ್ತೇನೆ ಎನ್ನುತ್ತಾರೆ. 3 ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿ ಮುದ್ದತಿಯಲ್ಲಿಯೂ ಸಹ 3 ನೇ ಪ್ರತಿವಾದಿ ನಿಮ್ಮೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತಾನೆ ಎಂದರೆ

ಸರಿಯಲ್ಲ. ಈ ಪ್ರಕರಣ ಇದ್ದಾಗ 3 ನೇ ಪ್ರತಿವಾದಿ ನ್ಯಾಯಾಲಯದ ಆವರಣದಲ್ಲಿ ಹಾಜರಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಸ್ವತ್ತಿಗೆ ಸಂಬಂದಿಸಿದಂತೆ 1 ನೇ ಪ್ರತಿವಾದಿಯೊಂದಿಗೆ ಆದ ಎಲ್ಲಾ ವ್ಯವಹಾರದ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾನು ದಿನಪತ್ರಿಕೆಗಳನ್ನು ಓದುವುದಿಲ್ಲ. 1 ನೇ ಪ್ರತಿವಾದಿ 3 ನೇ ಪ್ರತಿವಾದಿಯೊಂದಿಗೆ ಖರೀದಿ ಕರಾರು ಕಾಗದ ಪತ್ರ ಮಾಡಿಕೊಂಡ ನಂತರ ದಾವಾ ಸ್ವತ್ತನ್ನು ಯಾರು ಖರೀದಿ ತೆಗೆದುಕೊಳ್ಳದಂತೆ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ತೆಗೆದುಕೊಂಡಿದ್ದ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಓ ಎಸ್ 342/2015 ರಲ್ಲಿ 3 ನೇ ಪ್ರತಿವಾದಿ ದಾವಾ ಸ್ವತ್ತು ನನ್ನದು ಒಬ್ಬನದಲ್ಲ ನಮ್ಮ ಕುಟುಂಬದ ಜಂಟಿ ಆಸ್ತಿ ಎಂದು ಪ್ರತಿವಾದ ಪತ್ರದಲ್ಲಿ ಹೇಳಿದ ವಿಚಾರ ನಿಮಗೆ ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮಗೆ 1 ನೇ ಪ್ರತಿವಾದಿ ದಾವೆ ಹೂಡಿದ ವಿಚಾರ ಹಾಗೂ ಅವರೊಂದಿಗೆ 3 ನೇ ಪ್ರತಿವಾದಿ ಕರಾರು ಪತ್ರ ಬರೆದುಕೊಟ್ಟ ವಿಚಾರ ಹಾಗೂ ಸುಪ್ರೀಂ ಕೋರ್ಟನವರೆಗೂ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಪ್ರಕರಣ ಚಾಲ್ತಿ ಇದ್ದ ಬಗ್ಗೆ ತಿಳಿದಿರುತ್ತದೆ ಎಂದರೆ ಸಾಕ್ಷಿ ತಿಳಿದಿಲ್ಲ ಎನ್ನುತ್ತಾರೆ. ನಿಮಗೆ ಸದರಿ ವಿಷಯ ತಿಳಿದಿದ್ದರೂ ಸಹ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಾ ಇದ್ದೀರಿ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಚಿಟ್ಟಿ ಅವರ ಕಡೆಯಿಂದ 2002 ರಲ್ಲಿ 2 ಎಕರೆ 34 ಗುಂಟೆ ಖರೀದಿ ಮಾಡಿದ್ದ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2009ರಲ್ಲಿ ನೇಸರಗಿ ಕಡೆಯಿಂದ 3 ನೇ ಪ್ರತಿವಾದಿ ಸರ್ವೇ ನಂಬರ 295/2, 1 ಎಕರೆ 12 ಗುಂಟೆ ಖರೀದಿಸಿರುವ ವಿಚಾರ ನಿಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 3 ನೇ ಪ್ರತಿವಾದಿ ಸದರಿ 2 ಸ್ವತ್ತುಗಳನ್ನು ಸ್ವಂತ ಆದಾಯದಿಂದ ಖರೀದಿ ಮಾಡಿ ಬೇರೆಯವರಿಗೆ ದಿ. 11.02.2016 ರಂದು ಮಾರಾಟ ಮಾಡಿದ ವಿಚಾರ ನಿಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ 2 ಸ್ವತ್ತುಗಳನ್ನು ಪ್ರಕಾಶ ಕಲ್ಲಪ್ಪ ಏಲಿಗಾರ ಅವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸುಪ್ರೀಂ ಕೋರ್ಟನಲ್ಲಿ ಪ್ರಕರಣದ ಇತ್ಯರ್ಥ ಆದ ನಂತರ ಅಮಲಾದಾರಿ ಅರ್ಜಿ ಸಲ್ಲಿಸಿ ನ್ಯಾಯಾಲಯದ ಮೂಲಕ 1 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಪತ್ರ ಆದ ವಿಚಾರ ನಿಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಖರೀದಿ ಪತ್ರ ಆದ ನಂತರ 1 ನೇ ಪ್ರತಿವಾದಿ ಅವರ ಹೆಸರಿಗೆ ಕಾನೂನು ರೀತಿ ಬದಲಾವಣೆ ಆದ ವಿಚಾರ ನಿಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಕಾನೂನು ರೀತಿ ದಾವಾ ಸ್ವತ್ತಿನ ಕಬ್ಜವನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿ ಕಬ್ಜ ನಾವೇ ಇರುತ್ತೇವೆ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ನಾನೇ ಸ್ವಾದೀನದಲ್ಲಿರುವ ಬಗ್ಗೆ ದಾಖಲೆ

ಹಾಜರುಪಡಿಸಿರುವುದಿಲ್ಲ. ದಾವಾ ದಾಖಲಿಸುವ ಸಮಯದಲ್ಲಿ ಅಥವಾ ದಾವಾ ಚಾಲ್ತಿಯಲ್ಲಿರುವಾಗ ಹಾಗೂ ಇಂದಿನವರೆಗೂ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಉತಾರದಲ್ಲಿ ಯಾರ ಹೆಸರು ಇರುತ್ತದೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. **1** ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾ ಸ್ವತ್ತನ್ನು ಮಾಡಿಕೊಂಡ ನಂತರ ಸದರಿ ಸ್ವತ್ತನ್ನು **2** ನೇ ಪ್ರತಿವಾದಿ ಹೆಸರಿಗೆ ದಿ. **16.10.2023** ರಂದು ಭಕ್ಷೀಸ್ ಪತ್ರ ಮೂಲಕ ನೀಡಿದ ವಿಚಾರ ನಿಮಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಾವಾಗೆ ಸಂಬಂದಿಸಿದ ಮಾಹಿತಿಯನ್ನು ನಾನೇ ಹೇಳಿರುತ್ತೇನೆ. **2** ನೇ ಪ್ರತಿವಾದಿಯನ್ನು ಯಾಕೆ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದು ಹೇಳಲಾಗುವುದ ಎಂದರೆ ಸಾಕ್ಷಿ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. **3** ನೇ ಪ್ರತಿವಾದಿ ನನ್ನ ಸ್ವತ್ತನ್ನು ಮಾರಾಟ ಮಾಡಿದ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. **3** ನೇ ಪ್ರತಿವಾದಿ ಈ ಹಿಂದೆ ದಾವಾ ಸ್ವತ್ತಿಗೆ ಸಂಬಂದಿಸಿದ ದಾವೆಯಲ್ಲಿ ವಿಫಲಗೊಂಡ ಕಾರಣ ನಿಮ್ಮನ್ನು ಮುಂದೆ ಮಾಡಿ ನೀವು ಹಾಗೂ **3** ನೇ ಪ್ರತಿವಾದಿ ಸೇರಿಕೊಂಡು ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಪ್ರತಿವಾದಿ **1** ಮತ್ತು **2** ರವರು ಮಾತ್ರ ಹಕ್ಕು ಹೊಂದಿರುತ್ತಾರೆ ಸುಳ್ಳು ಸಂಗತಿಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ